ಶೀಲಿಸಿ ಅವರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿ ಕಡ್ಡಾಯವಾಗಿ ವಾಸಮಾಡಬೇಕೆಂದು ಹೇಳಿದರೆ ಏಕೆ ಆಗುವುದಿಲ್ಲ ?

ಶ್ರೀ ಬಿ. ರಾಚಯ್ಯ.— ವಿಲೇಜ್ ಆಕೌಂಟೆಂಟ್‌ಗಳಿಗೆ ಮತ್ತು ಶಿಕ್ಷಕರಿಗೆ ಊರಿನ ಹೊರಗಡೆಯಲ್ಲಿ ಮನೆ ಕಟ್ಟುತ್ತಾರೆ. ಹೀಗೆ ಕಟ್ಟಿಸಿದ ಮನೆಗಳಿಗೆ ಹಿಂದೆ ಶಿಕ್ಷಕರು ಬಾಡಿಗೆ ಜಾಸ್ತಿಯೆಂದು ಹೋಗಲಿಲ್ಲ. ಆದ್ದರಿಂದ ಈ ಯೋಜನೆಯನ್ನು ನಿಲ್ಲಿಸಲಾಯಿತು. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರಿಗೆ ಮನೆಬಾಡಿಗೆಯೆಂದು ಈ ವರ್ಷದಿಂದ ಹದಿನೈದು ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದರಿಂದ ಅವರಿಗೆ ಸ್ವಲ್ಪಮಟ್ಟಿಗಾದರೂ ಸಮಾಧಾನವಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಸಾಧ್ಯವಾದ ಮಟ್ಟಿಗೆ ಎನ್.ಆರ್.ಇ.ಪಿ.ಯಿಂದ ಮಾನ್ಯ ಸದಸ್ಯರು ಆಯಾಯ ತಾಲ್ಲೂಕಿನಲ್ಲಿ ಇಂತಹ ಒಂದು ಕಟ್ಟಡ ಕಟ್ಟಿಸುವುದಕ್ಕೆ ಪ್ರಯತ್ನಮಾಡಿದರೆ ನಮಗೂ ಸಹ ಸಹಾಯವಾಗುತ್ತದೆ ಎಂದು ನಾನು ತಿಳಿಸುತ್ತೇನೆ.

ಶ್ರೀ ಬಸವರಾಜ ಹೆಚ್. ಪಾಟೀಲ್.— ಎನ್.ಆರ್.ಇ.ಪಿ.ಯಿಂದ ಮಾಡುವುದಕ್ಕೆ ಮೊದಲು ಜನತಾ ಮನೆಗಳಲ್ಲಿ ಒಂದೆರಡು ಮನೆಗಳನ್ನು ಅವರಿಗೆ ವಿಾಸಲಾಗಿಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಆಗುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.— ಈಗ ಶಿಕ್ಷಕರಿಗೆ ಆರುನೂರು ರೂಪಾಯಿಗಳಿಗಿಂತ ಜಾಸ್ತಿ ಸಂಬಳ ಬರುತ್ತದೆ ಎಂದು ಕಾನೂನು ಮಂತ್ರಿಗಳು ಹೇಳಿದರು. ಜನತಾ ಮನೆಗಳನ್ನು ಕಟ್ಟುವ ಉದ್ದೇಶ ನಿರ್ಗತಿಕರಿಗೆ ಮನೆ ಇಲ್ಲದೇ ಇರತಕ್ಕಂಥವರ ಅನುಕೂಲಕ್ಕಾಗಿ. ಎನ್.ಆರ್.ಇ.ಪಿ.ಯಿಂದ ಮತ್ತು ಹುಡ್ಕೊ, ಸಹಕಾರ ಸಂಘಗಳ ಮುಖಾಂತರ ಆಯಾಯ ತಾಲ್ಲೂಕಿನಲ್ಲಿ ಇದನ್ನು ಮಾಡಿದರೆ ಸ್ವಲ್ಪಮಟ್ಟಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಪಿ. ತಿಪ್ಪಯ್ಯ.— ಸಂಬಂಧಪಟ್ಟ ಮಾನ್ಯ ಮಂತ್ರಿಗಳೂ ಇಲ್ಲಿದ್ದಾರೆ. ಸರ್ಕಾರದಿಂದಲೇ ಈ ಸೌಲಭ್ಯ ಒದಗಿಸಿಕೊಡಲು ಸಾಧ್ಯವಿಲ್ಲವೆ?

ವಿಷಯ : ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳು.

ಪ್ರ. ಸಂಖ್ಯೆ 701 (1701) ಶ್ರೀ ಆಪ್ಪಣ್ಣ ಹೆಗ್ಡೆ (ಬೈಂದೂರು).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ರಾಜ್ಯದ ವಿವಿಧ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು 1984-85ರ ಶೈಕ್ಷಣಿಕ ವರ್ಷದ ಆರಂಭದೊಳಗಾದರೂ ಭರ್ತಿಮಾಡಲಾಗುವುದೆ ;

(ಆ) ಪ್ರೌಢಶಾಲೆಗಳು ಮತ್ತು ಕಿರಿಯ ಹಾಗೂ ಹಿರಿಯ ವಿದ್ಯಾಲಯಗಳಲ್ಲಿಯೂ ಸಹ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲಾಗುವುದೇ ;

(ಇ) ಸಾರ್ವಜನಿಕ ಶಿಕ್ಷಣ ಯೋಜನೆ ಮೇರೆಗೆ ಪ್ರಾರಂಭಿಸಲಾದ ಶಾಲೆಗಳಿಗೆ ಶಿಕ್ಷಕರನ್ನು ಕೂಡಲೇ ನೇಮಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—
(ಅ) ಹೊಸ ನೇಮಕಾತಿ ನಿಯಮಾವಳಿಗಳ ರಚನೆಯ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದ್ದು ಶೀಘ್ರವೇ ಎಲ್ಲಾ ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು.
(ಆ) ಹೌದು.
(ಇ) ಹೌದು.

ವಿಷಯ : ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳು.

ಪ್ರ. ಸಂಖ್ಯೆ 702 (1671) ಶ್ರೀ ಶ್ರೀಪಾದ ಹೆಗಡೆ ಕಡಪೆ (ಅಂಕೋಲಾ).— ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ಇವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡಬೇಕಾಗಿದೆ) ;

(ಆ) ಸದರಿ ಶಾಲೆಗಳಲ್ಲಿ ಇರಬೇಕಾದ ಶಿಕ್ಷಕರ ಸಂಖ್ಯೆ ಎಷ್ಟು ಮತ್ತು ಕೊರತೆ ಎಷ್ಟು (ತಾಲ್ಲೂಕುವಾರು ವಿವರ ಬೇಕಾಗಿದೆ) ;

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—

(ಅ) ಶಾಲೆಗಳ ಸಂಖ್ಯೆ 1603
ವಿದ್ಯಾರ್ಥಿಗಳ ಸಂಖ್ಯೆ 1,57,018

(ತಾಲ್ಲೂಕುವಾರು ವಿವರಗಳನ್ನು ಲಗತ್ತಿಸಿದೆ).

(ಆ) ಇರಬೇಕಾದ ಶಿಕ್ಷಕರ ಹುದ್ದೆಗಳ ಸಂಖ್ಯೆ 4271
ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ 4127
ಕೊರತೆ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ 144

(ತಾಲ್ಲೂಕುವಾರು ವಿವರಗಳನ್ನು ಲಗತ್ತಿಸಿದೆ).

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	ಶಿಕ್ಷಕರ ಹುದ್ದೆಗಳ ಸಂಖ್ಯೆ	ಹೆಚ್ಚುವರಿ ಬೇಕಾಗಿರುವ ಹುದ್ದೆಗಳ ವಿವರ
1.	ಕಾರವಾರ	202	19939	605	....
2.	ಅಂಕೋಲಾ	125	13164	369	....
3.	ಕುಮಟ	171	18820	540	....
4.	ಹೊನ್ನಾವರ	196	18370	470	....
5.	ಭಟ್ಕಳ	104	15700	311	82
6.	ಸಿದ್ದಾಪುರ	162	14433	356	5
7.	ಸಿರ್ಸಿ	217	20260	551	....
8.	ಮುಡಗೋಡ	85	7445	129	57
9.	ಯಲ್ಲಾಪುರ	123	8945	243	....
10.	ಹಳಿಯಾಳ	98	13915	354	....
11.	ಸೂಪಾ	120	6227	199	....
		1603	157018	4127	144

ಶ್ರೀ ಬಿ ರಾಚಯ್ಯ.— ಸ್ಕೂಲ್ ಕಟ್ಟಿಡ ಕಟ್ಟುವುದಕ್ಕೇ ಹಣ ಇಲ್ಲದಿರುವಾಗ ಉಪಾಧ್ಯಾಯರಿಗೆ ಮನೆ ಕಟ್ಟಿಸಿಕೊಡಿ ಎಂದು ಹೇಳಿದರೆ ಬಹುಶಃ ಅದು ಕಷ್ಟವಾಗುತ್ತದೆ.

ಶ್ರೀ ಶ್ರೀಪಾದ ಹೆಗಡೆ ಕಡವೆ.— ತಾವು ಕೊಟ್ಟಿರುವ ಮಾಹಿತಿ ಸತ್ಯಕ್ಕೆ ದೂರವಾಗಿದೆ. ಇದನ್ನು ಮತ್ತೊಂದು ಸಲ ಪರಿಶೀಲನೆ ಮಾಡಬೇಕು. ಈಗ ಸಿರ್ಸಿಯಲ್ಲಿ ಯಾವ ಹುದ್ದೆಗಳೂ ಖಾಲಿಯಿಲ್ಲವೆಂದು ಹೇಳಿದ್ದಾರೆ. ಅಲ್ಲಿ 40 ಶಿಕ್ಷಕರ ಕೊರತೆ ಇದೆ. ಈ ಹುದ್ದೆಗಳನ್ನು ಭರ್ತಿಮಾಡಲಿಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.— ಖಾಲಿ ಇರತಕ್ಕಂಥವು ಹೆಚ್ಚುವರಿ ಬೇಕಾಗಿರತಕ್ಕಂಥ ಹುದ್ದೆಗಳು. ಉತ್ತರದಲ್ಲಿ ಮಂಜೂರಾತಿ ಆಗಿರತಕ್ಕಂಥ ಹುದ್ದೆಗಳನ್ನು ಮಾತ್ರ ಕೊಟ್ಟಿದ್ದೇವೆ. ಹೆಚ್ಚುವರಿ ಹುದ್ದೆಗಳನ್ನು ಕೊಟ್ಟಿಲ್ಲ. ಇದನ್ನು ಪರಿಶೀಲನೆ ಮಾಡುತ್ತೇನೆ.

ವಿಷಯ : ಗ್ರಾಮಾಂತರ ಉದ್ಯೋಗ ದೃಢೀಕರಣ ಯೋಜನೆ.

ಪ್ರ. ಸಂಖ್ಯೆ 704 (1399) ಡಾ. ಹೆಗ್ಗಪ್ಪ (ಬ್ಯಾಡಗಿ).— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳಿಂದ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಬ್ಯಾಡಗೀ ತಾಲ್ಲೂಕು ಗ್ರಾಮಾಂತರ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಈ ಯೋಜನೆಯ ಉದ್ಘಾಟನೆಯ ನಂತರ ಎಷ್ಟು ಜನರಿಗೆ ಉದ್ಯೋಗ ಕೊಡಲಾಗಿದೆ.

(ಇ) ಈ ಯೋಜನೆಗೆ ಒಟ್ಟು ಎಷ್ಟು ಹಣ ಮಂಜೂರು ಮಾಡಲಾಗಿದೆ.